(ಶ್ರೀ ಕಡಿದಾಳ್ ಮಂಜಪ್ಪ.)

ಸರ್ಕಾರದವರು ಕೊಟ್ಟಿರತಕ್ಕಂಥ ಹುಕ್ಕುಂಗಳಿಗನುಸಾರವಾಗಿ ಚಾಚೂ ತಪ್ಪದೆ ನಡೆಸಿಕೊಂಡು ಬರಬೇಕೆಂದು ಅವರಿಗೆಲ್ಲಾ ತಿಳಿವಳಿಕೆ ಕೊಡಲಾಗಿದೆ; ಮತ್ತು ಹಾಗೆ ನಡೆಸಬೇಕೆಂಬ ಬಗ್ಗೆ ಒಂದು ಸರ್ಕಾರಿ ಹುಕುಮನ್ನೇ ಮಾಡಲಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಹುಕುಮ್ಮಿಗನುಸಾರವಾಗಿ P. S. C. ಅವರು ಚಾಚೂ ತಪ್ಪದೆ ನಡೆಸಿಕೊಂಡು ಬರುತ್ತಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಈ ಹುಕುಮನ್ನು ಇತ್ತೀಚೆಗೆ ಹೊಸದಾಗಿ ಸಾದರು ಮಾಡಲಾಗಿದೆ.

Nonavinakere Tank Bund (necessity to widen).

Q.— 218. Sri T. G. THIMME GOWDA (Tiptur).—

Will the Government be pleased to state :—

(*a*) whether it is not a fact that the urgency of widening the tank-bund of Nonavinakere tank was brought to their notice and representations made as early as May 1952;

(*b*) whether it is not a fact that there was even a proposal mooted to divert the road (Tiptur-Turuvekere) by acquiring certain lands and a survey also made;

(*c*) whether any further measures have been taken to meet the urgency since then and if so, what are they;

d) whether they would undertake the work of widening the road on the bund at least during the current financial year?

A.—Sri Kadidal MANJAPPA (Minister for Revenue and Public Works).—

(*a*) Yes

(*b*) Yes.

(*c*) Yes. Estimates have been prepared both for widening the road on the tank bund and for deviating the road lower down the bund through the atchkat lands.

(*d*) The estimates are under scrutiny.

ಶ್ರೀ ಟಿ. ಜಿ. ತಿಮ್ಮೇಗೌಡ.—ನೊಣವಿನಕೆರೆಯ ಏರಿಯನ್ನು ಅಗಲ ಮಾಡತಕ್ಕ ಸಂಬಂಧದಲ್ಲಿ ತಯಾರಿಸಿರತಕ್ಕ ಅಂದಾಜಿದ ಮೊಬಲಗು ಎಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು ಒಂದು ಲಕ್ಷ 29 ಸಾವಿರ ರೂಪಾಯಿಗಳು.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ವರ್ಷ ಕೆಲಸವನ್ನು ಪ್ರಾರಂಭಿಸಲು ಏಕೆ ಕಾರ್ಯಕ್ರಮಗಳನ್ನು ಕೈಗೊಳ್ಳಲಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಆ ಎಸ್ಟಿಮೇಟನ್ನು ಇನ್ನೂ ಪರಿಶೀಲನೆ ಮಾಡಲಾಗುತ್ತಿದೆ. ಅದರಿಂದ ಕೆಲಸವನ್ನು ಪ್ರಾರಂಭಿಸಲು ಸಾಧ್ಯವಾಗಿಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡ.—ಮುಂದಿನ ಸಾಲಿನಲ್ಲಾದರೂ ತಾವು ಈ ಕೆಲಸವನ್ನು ಕೈಗೊಳ್ಳುವಿರಾ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರವನ್ನು ನಾನು ಈಗ ನಿರ್ಧರವಾಗಿ ಹೇಳುವುದಕ್ಕಾಗುವುದಿಲ್ಲ.

Assistant Engineers (filling up of vacancies from 1944.)

Q.—430. Sri N. HUCHMASTHY GOWDA (Huliyurdurga).—

Will the Government be pleased to state :—

(*a*) the number of vacancies of Assistant Engineers from 1944 up-to-date;

(*b*) the number of supervsors promoted as Assistant Engineers from the year 1944;

(*c*) the number of probationers taken during this period;

(*d*) the number of supervisors now in charge of sub-divisions?

A.—Sri Kadidal MANJAPPA (Minister for Revenue and Public Works).—

(*a*) 119
(*b*) 115
(*c*) 61
(*d*) 23

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅಸಿಸ್ಟೆಂಟ್ ಇಂಜಿನಿಯರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳುವುದರ ಬಗ್ಗೆ ಹಿಂದೆ ಜಾರಿಮಾಡಲಾಗಿದ್ದ ಆಜ್ಞೆಯೇ ಈಗಲೂ ಜಾರಿಯಲ್ಲಿರುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ. ಆದರೆ ಈ ಬಗ್ಗೆ ಮತ್ತೊಂದು ಹುಕುಮನ್ನು 1953ರಲ್ಲಿ ಹೊರಡಿಸಲಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗ ತಾವು ಹೊಸದಾಗಿ ಹೊರಡಿಸಿರುವಂಥ ಆಜ್ಞೆ ಸಹ ಹಿಂದಿನ ಆಜ್ಞೆಗೆ ಅನುಗುಣವಾಗಿಯೇ ಇದೆಯಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾವು ಇಲ್ಲಿ (ಎ) ಪ್ರಶ್ನೆಗೆ ಉತ್ತರವಾಗಿ 119 ಸ್ಥಾನಗಳೆಂದು ಹೇಳಲಾಗಿದೆ. ಇಷ್ಟೇ ಸ್ಥಾನಗಳೋ ಅಥವಾ ಇನ್ನೂ ಏನಾದರೂ ಇದರಲ್ಲಿ ತಪ್ಪು ಬಿದ್ದಿದೆಯೋ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲಿ ಮುದ್ರಣ ದೋಷದಿಂದ 199 ಎಂಬುದಕ್ಕೆ ಬದಲಾಗಿ 119 ಎಂದು ತಪ್ಪಾಗಿ ಬಿದ್ದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹೀಗೆ ಖಾಲಿ ಬಿದ್ದಿದ್ದ 199 ಸ್ಥಾನಗಳನ್ನು ಭರ್ತಿ ಮಾಡುವಾಗ ಇದರಲ್ಲಿ ಶೇಕಡಾ 5ರಿರಷ್ಟು ಸ್ಥಾನಗಳನ್ನು ಬಿಡಿಸಿಕೊಡುವುದರ ಮೂಲಕ ಭರ್ತಿಮಾಡಬೇಕೆಂದು ಹಿಂದಿನ ಸರ್ಕಾರಿ ಆಜ್ಞೆಯಲ್ಲಿ ಹೇಳಲಾಗಿದ್ದಿತಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇಲ್ಲಿಯವರೆಗೂ ಈ ಹುಕುಂ ಪ್ರಕಾರ ಕಾರ್ಯಕ್ರಮವನ್ನು ಕೈಗೊಳ್ಳದೆ ಇದ್ದುದರಿಂದ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸುವ ನಲುವಾಗಿ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—1944ರಲ್ಲಿ ಹೊರಡಿಸಿರುವ ಸರ್ಕಾರಿ ಹುಕುಂ ಪ್ರಕಾರ ಶೇಕಡಾ 50ರಷ್ಟಕ್ಕೆ ಕಡಮೆ ಇಲ್ಲದೆ ನೇರವಾಗಿಯೂ ಮತ್ತು ಇನ್ನುಳಿದ 50ರಷ್ಟು ಸ್ಥಾನಗಳನ್ನು ಬಡ್ತಿ ಕೊಡುವ ಮೂಲಕವೂ ಸ್ಥಾನಗಳನ್ನು ಭರ್ತಿ ಮಾಡಬೇಕೆಂದು ತಿಳಿಸಲಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನನ್ನ ಪ್ರಶ್ನೆ—1944ರಲ್ಲಿ ಆದ ಸರ್ಕಾರಿ ಆಜ್ಞೆಗನುಗಣವಾಗಿ, ಅದು ಜಾರಿಯಲ್ಲಿದ್ದರೂ ಅದರ ಪ್ರಕಾರ ಕಾರ್ಯ ಕ್ರಮಗಳನ್ನು ನಡೆಸದೆ ಇದ್ದ ಕಾರಣ ಉಂಟಾಗಿರತಕ್ಕ ವ್ಯತ್ಯಾಸವನ್ನು ಸರಿಪಡಿಸಲು ತಾವೇನು ಕಾರ್ಯ ಕ್ರಮಕ್ಕೆಗೊಂಡಿದ್ದೀರಿ ಎಂದು.

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕಾಗಿ ಈಗ ಪುನಃ ಪ್ರೊಬೇಷನರುಗಳನ್ನು ತೆಗೆದುಕೊಳ್ಳಬೇಕೆಂದು ಆಲೋಚಿಸುತ್ತಿದ್ದೇವೆ. ಹೊಸದಾಗಿ 15 ಸ್ಥಾನಗಳನ್ನೂ ಮತ್ತು ಈ ಹಿಂದೆ ಮಂಜೂರಾಗಿದ್ದ ಸ್ಥಾನಗಳಲ್ಲಿ ಭರ್ತಿಯಾಗದೆ ಹಾಗೆಯೇ ಉಳಿದಿದ್ದಂಥ ಎರಡು ಸ್ಥಾನಗಳೂ—ಹೀಗೆ ಒಟ್ಟಿಗೆ 17 ಸ್ಥಾನಗಳಿಗೆ ಸೂಪರ್‌ವೈಜರುಗಳನ್ನು ತೆಗೆದುಕೊಳ್ಳುವುದರ ಬಗ್ಗೆ P. S. C. ಅವರನ್ನು ಕೇಳಲಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗ ತಾವು ತಿಳಿಸುವಂಥ 17 ಸ್ಥಾನಗಳಿಗೆ ಜನರನ್ನು ಭರ್ತಿಮಾಡಿಕೊಂಡಾಗ್ಗೂ ಆ 1911ರಲ್ಲಿ ಶೇಕಡ 50ರಷ್ಟು ಸ್ಥಾನಗಳನ್ನು ಬಡ್ತಿ ಮೂಲಕ ಭರ್ತಿಮಾಡಿದಹಾಗೆ ಆಗುವುದಿಲ್ಲ. ಅದಕ್ಕಾಗಿ ತಾವು ಮುಂದೇನು ಕಾರ್ಯ ಕ್ರಮ ಕೈಗೊಳ್ಳುವಿರಿ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಬಗ್ಗೆ ಇನ್ನೂ ಆಲೋಚನೆ ಮಾಡಬೇಕಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ನೌಕರಿಗಳನ್ನು ಹಂಚತಕ್ಕ ವಿಧಾನದಲ್ಲಿ ಕೆಲವರಿಗೆ ಕೆಲಸಗಳೇ ಸಿಕ್ಕದೆ ಇದ್ದಾಗ್ಗೂ, ಮತ್ತೆ ಕೆಲವರಿಗೆ ಓವರ್ ರೆಪ್ರೆಸೆಂಟ್ ಆಗುವಹಾಗೆ ಕೆಲಸಗಳನ್ನು ಕೊಡಲಾಗುತ್ತಿದೆ ಎಂಬುದು ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಇದನ್ನು ಸರಿಪಡಿಸತಕ್ಕ ಬಗ್ಗೆ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಒಂದೇ ನಲಕ್ಕೆ ಕಾರ್ಯಕ್ರಮ ಕೈಗೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈಗ ಖಾಲಿ ಇರುವ ಸ್ಥಾನಗಳನ್ನು ಭರ್ತಿ ಮಾಡುವಾಗ ಶೇಕಡ 50ರಷ್ಟನ್ನು ಪ್ರಮೋಷನ್‌ಗಾಗಿ ತೆಗೆದಿಡಲಾಗುತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಈ ಅಸೆಂಬ್ಲಿಯ ಮುಂದೆ ತಂದಿದ್ದ ನಿರ್ಣಯಕ್ಕನುಗುಣವಾಗಿ ಕಾರ್ಯ ಕ್ರಮ ಕೈಗೊಳ್ಳಲು ಎಲ್ಲಾ ಪ್ರಯತ್ನಗಳನ್ನೂ ಮಾಡಲಾಗುವುದು. ಸಾಧ್ಯವಾದಷ್ಟನ್ನೂ ಈಗಾಗಲೇ ಮಾಡಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಹಿಂದೆ ಷೆಡ್ಯೂಲ್ ಕ್ಯಾಸ್ಟಿನವರಿಗೆ ಗೆಜೆಟೆಡ್ ಹುದ್ದೆಗಳ ಪೈಕಿ ನಾಲ್ಕು ಸ್ಥಾನಗಳನ್ನು ಮೀಸಲಾಗಿಟ್ಟಿತ್ತಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಆ ನಾಲ್ಕರಲ್ಲಿ ಎರಡನ್ನು ಮಾತ್ರ ಭರ್ತಿ ಮಾಡಲಾಗಿತ್ತು. ಇನ್ನುಳಿದ ಎರಡು ಸ್ಥಾನಕ್ಕೆ ಅರ್ಹರಾದವರು ಯಾರೂ ಬರಲಿಲ್ಲವಾದ್ದರಿಂದ ಅವುಗಳನ್ನು ಭರ್ತಿ ಮಾಡಲು ಸಾಧ್ಯವಾಗಲಿಲ್ಲ. ಈಗ ಈ ಎರಡು ಸ್ಥಾನಗಳನ್ನೂ ಸೇರಿಸಿ ಒಟ್ಟಿಗೆ 17 ಸ್ಥಾನಗಳನ್ನು ಭರ್ತಿಮಾಡಬೇಕೆಂದು ಉದ್ದೇಶಿಸಲಾಗಿದೆ.

ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್.—ಇಲ್ಲಿಗೆ 15-20 ವರ್ಷಗಳಿಂದ ಎಷ್ಟು ಜನ ಸೂಪರ್‌ವೈಜರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳಲಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್.—ಇದರಲ್ಲಿ ಅರ್ಧಭಾಗವನ್ನು ಪ್ರಮೋಷನ್ ಮೂಲಕವೇ ಭರ್ತಿ ಮಾಡಬೇಕೆಂದು ನಿಯಮಾವಳಿತ್ತಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಅದು ಈಗಲೂ ಇದೆ.

ಶ್ರೀ ಎಸ್. ಶ್ರೀನಿವಾಸಅಯ್ಯಂಗಾರ್.—ಈ ಹಿಂದೆ ಸರ್ಕಾರದವರು ಹಾಗೆ ಪ್ರಮೋಷನ್ ಕೊಡುವಾಗ ಸೀನಿಯಾರಿಟಿ ಮತ್ತು ಮೆರಿಟ್ಟು—ಈ ಎರಡನ್ನೂ ನೋಡಿಕೊಂಡು ಪ್ರಮೋಷನ್ ಕೊಡುತ್ತಿದ್ದರಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದೇ ರೀತಿ ಹಿಂದೆ 10 ಜನರಿಗೆ ಪ್ರಮೋಷನ್ ಕೊಡುವಾಗ ಸೀನಿಯಾರಿಟಿ-ಕಂ-ಮೆರಿಟ್ ನೋಡಿಕೊಂಡು ಪ್ರಮೋಷನ್ ಕೊಡಲಾಯಿತು.

ಶ್ರೀ ಬಿ. ರಾಚಯ್ಯ.—ಈ ನಾಲ್ಕು ಸ್ಥಾನಗಳು ಮೀಸಲಾಗಿತ್ತು. ಅದರಲ್ಲಿ ಎರಡು ಸ್ಥಾನಗಳನ್ನು ಭರ್ತಿಮಾಡಿತ್ತು. ಆಗ ಇನ್ನೂ ಇಬ್ಬರು ಜನರು ಅರ್ಜಿ ಹಾಕಲಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಸರಿಯಾದ ಅರ್ಹತೆಯಿದ್ದ ಜನರು ಸಿಕ್ಕಲಿಲ್ಲ.

ಶ್ರೀ ಬಿ. ರಾಚಯ್ಯ.—ಈಗ ಪ್ರೊಬೇಷನರುಗಳಾಗಿ ತೆಗೆದುಕೊಂಡರೆ ಅವರ ರ್ಯಾಂಕಿಗೆ ತೊಂದರೆಯಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಸರಿಯಾದ ಅರ್ಹತೆಯಿಲ್ಲದಿದ್ದರೆ ಏನುಮಾಡುವುದು ?

ಶ್ರೀ ಬಿ. ರಾಚಯ್ಯ.—ಅದೇ ತಿಂಗಳಿನಲ್ಲಿ ಸರಿಯಾದ ಅರ್ಹತೆಯಿರುವವರು ಅರ್ಜಿ ಹಾಕಿಕೊಳ್ಳಬಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಆಮೇಲೆ ಹಾಕ್ಕಿದರು.

ಶ್ರೀ ಬಿ. ರಾಚಯ್ಯ.—ಆ ಎರಡು ಖಾಲಿ ಸ್ಥಾನಗಳನ್ನೇ ಬೇರೆಯಾಗಿ ಏಕೆ ಪ್ರಕಟಮಾಡಬಾರದು ?

ಶ್ರೀ ಕಡಿದಾಳ್ ಮಂಜಪ್ಪ.—ಒಟ್ಟು ಹದಿನೇಳು ಸ್ಥಾನಗಳಿಗೆ ಮಾತ್ರ ಅರ್ಜಿಗಳನ್ನು ಕರೆಯಲಾಗಿತ್ತು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಪ್ರೊಬೇಷನರುಗಳು ಮತ್ತು ಸೂಪರ್‌ವೈಜರುಗಳನ್ನು ನೇಮಕಮಾಡುವಾಗ ಯಾವ ರೇಷಿಯೋ ಮೇಲೆ ಮಾಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದುಳಿದ ಮತ್ತು ಅಲ್ಪಸ್ವಲ್ಪ ಪ್ರಾತಿನಿಧ್ಯವಿರುವ ಪಂಗಡದವರಿಗೂ ತಕ್ಕಷ್ಟು ಪ್ರಾತಿನಿಧ್ಯಕೊಡಲು ಏರ್ಪಾಡು ಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಸಭೆಯಲ್ಲಿ ಗೊತ್ತಾಗಿರುವ ಹಾಗೆ 4/5 ಭಾಗ ಇವರನ್ನು ತೆಗೆದುಕೊಳ್ಳಲಾಗುತ್ತದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಗಮನದಲ್ಲಿಡುತ್ತೇವೆ.

ಶ್ರೀ ಟಿ. ಸಿ. ಬನಪ್ಪ.—ಹಿಂದೆ ಪ್ರಮೋಷನ್ ಕೂಡ 1 : 3 ರೇಷಿಯೋ ಮೇಲೆ ಮಾಡಬೇಕೆಂದು ಇಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಮೋಷ್ಣ ಕೋಮುಹಿರಾ ರೇಷಿಯೋ ಆಧಾರದ ಮೇಲೆ ಮಾಡ ಬೇಕೆಂದರೆ ಆ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ವೆಂ. ಎಂ ಚಂದ್ರಶೇಖರಯ್ಯ.—ಇದು ವಿಶ್ವ ವಿದ್ಯಾನಿಲಯಕ್ಕೂ ಅನ್ವಯಿಸುತ್ತದೆಯೆ ?

ಶ್ರೀ ಕೆ. ಹನುಮಂತಯ್ಯ.—ಅದನ್ನು ಯೋಚನೆ ಮಾಡಿ ಹೇಳಬೇಕು.

Chemical Industries (Survey.)

Q.—48. Sri B. NARAYANASWAMY (Mysore South).—

Will the Government be pleased to state :—

whether any action has been taken to make a survey of private small-scale chemical industries in the State, if so, the number of industries and the condition of these industries ?

A.—Sri H. SIDDAVEERAPPA (Minister for Home and Industries).—

No.

Sri B. NARAYANASWAMY.—In reply to my question, a grand NO has been answered. I cannot understand how the Government or the Department is not aware of these industries.

Sri H. SIDDAVEERAPPA.—I did not hear the Hon'ble Member.

Sri B. NARAYANASWAMY.—In reply to my question, you have given a grand NO. Am I to understand that the Department is not aware of these industries ?

Sri H. SIDDAVEERAPPA. The Department is aware of the industries. But they did not know what exactly the definition of small-scale chemical industry is.

Sri B. NARAYANASWAMY.—At least, do they know the definition of chemical industries ?

Sri H. SIDDAVEERAPPA.—Yes.

Mr. SPEAKER.—You need not go into all that. It is only a question that has to be put.

Sri B. NARAYANASWAMY.—At least, will Government let me know whether the department have collected any statistics regarding small-scale industries ?

Sri H. SIDDAVEERAPPA.—As I have already said, I was not able to follow what exactly the Hon'ble Member meant by small-scale chemical industry in the State. If the Hon'ble Member lets me know what exactly he wants, I shall be able to collect the information and see what can be done in the matter.

Sri B. NARAYANASWAMY.—Are Government aware that in the cities of Mysore and Bangalore, manufacture of inks, soap, phenyle and these lower compositions—all these are manufactured on a small scale, more like cottage or home industries, including perfumery ? These are chemical industries which are run on small scale. It is really surprising that Government . . . .

Mr. SPEAKER.—You are arguing the question. You are wasting the time of the House in arguments.

Sri B. NARAYANASWAMY.—I am extremely sorry, Sir. I thought Government knew what small-scale chemical industry is. . . . .

Sri K. HANUMANTHAIYA.—During the question-hour, I am surprised to find Hon'ble Members making comments instead of seeking information.

Sri B. NARAYANASWAMY.—I have sought information and no information is given.

Weights and Measures (steps to regulate).

Q.—177. Sri A. V. NARASIMHA REDDY (Bangalore South).—

Will the Government be pleased to state :—

(*a*) the steps that they have taken to regulate the weights and measures in the State ;

(*b*) whether they have passed orders to use only *chintal* for weighing the articles by the merchants ;

(*c*) if so, when ?

A.—Sri H. SIDDAVEERAPPA (Minister for Home and Industries).—

(*a*) The Mysore Weights and Measures Act, 1902, has been extended to the entire State with effect from 1st October 1954 and a Draft Bill for amending this Act so as to exercise more effective regulation is being placed before the Legislature.